ಶಿಷ್ಟಾಚಾರವನ್ನು ರೂಪಿಸಿದ ಅರೋನ್, ಮಾಹಿತಿ ಸ್ವಾತಂತ್ರ್ಯದ ಮಹತ್ವವನ್ನು ಪ್ರತಿಪಾದಿಸಿದ ವಿಶ್ವದ ಮೊದಲಿಗನೆಂಬ ಖ್ಯಾತಿ ಪಡೆದಿದ್ದಾನೆ. 2008ರಲ್ಲಿ 'ಗೆರಿಲ್ಲಾ ಓಪನ್ ಆಕ್ಸೆಸ್ ಮೆನಿಫೆಸ್ಟೊ' ಪ್ರಕಟಿಸಿ – ನಮಗೆಲ್ಲ ಮಾಹಿತಿ ಅನಿವಾರ್ಯ, ಅದೆಲ್ಲೇ ಇದ್ದರೂ ಅದನ್ನು ಪಡೆದು, ಅದರ ಪ್ರತಿ ತಯಾರಿಸಿ ಇಡೀ ಜಗತ್ತಿಗೆ ಹಂಚಬೇಕು ಎಂದು ಪ್ರತಿಪಾದಿಸಿದ್ದ ಅರೋನ್, ನಮ್ಮೆಲ್ಲರ ಅನುಭವ ನಮಗೆ ಮಾತ್ರ ಸೀಮಿತಗೊಂಡು ಯಾರಿಗೂ ಗೊತ್ತಾಗದೇ ಹೋದರೆ ಲೋಕಕ್ಕೆ ಅದರಿಂದ ಪ್ರಯೋಜನವೇನು? ಎಂದಿದ್ದ.

ನಾವು ನಮಗೆ ಬೇಕೆನಿಸಿದ ಮಾಹಿತಿಯನ್ನು ವೆಬ್‌ಸೈಟ್‌ಗಳಲ್ಲಿ ಹುಡುಕುವಾಗ ಸುಲಭವಾಗಿ ಸಿಗುವುದಿಲ್ಲ. ಇಂತಿಷ್ಟು ಡಾಲರ್ ಅಥವಾ ಪೌಂಡ್ ಪಾವತಿಸಿ ಎಂಬ ಸಂದೇಶ ಕಂಪ್ಯೂಟರ್ ಪರದೆಯ ಮೇಲೆ ಮೂಡುತ್ತದೆ. ಇದು ಅರೋನ್‌ಗೆ ಸರಿಬರಲಿಲ್ಲ. ಅದರಲ್ಲೂ JSTORನ ಡಿಜಿಟಲ್ ಲೈಬ್ರರಿಯಲ್ಲಿರುವ ಅಸಂಖ್ಯಾತ ಸಂಶೋಧನಾ ಪ್ರಬಂಧ–ಮಾಹಿತಿ ಮುಕ್ತವಾಗಿ ದೊರೆಯದ್ದರಿಂದ ವ್ಯಗ್ರನಾದ ಅರೋನ್ ಮೆಸಚುಸೆಟ್ಸ್‌ನ ಕಂಪ್ಯೂಟರ್ ನೆಟ್‌ವರ್ಕ್ ಬಳಸಿ ಜೆಎಸ್‌ಟಿಒಆರ್‌ನ ಲೈಬ್ರರಿಯ ವೆಬ್‌ಸೈಟ್‌ನ್ನು ಹ್ಯಾಕ್‌ಮಾಡಿ, ಸಾವಿರಾರು ಫೈಲ್‌ಗಳನ್ನು ಡೌನ್‌ಲೋಡ್ ಮಾಡಿಬಿಟ್ಟ. ಇದನ್ನು ಪತ್ತೆ ಮಾಡಿದ ಜಸ್ಟರ್‌ನನ್ನು ತೀವ್ರ ವಿಚಾರಣೆಗೆ ಗುರಿಪಡಿಸಲಾಯಿತು. ತನ್ನನ್ನು ಜೈಲಿಗೆ ಕಳಿಸಿ ಹಿಂಸಿಸುತ್ತಾರೆ ಎಂದು ಚಿಂತಿಸಿದ ಅರೋನ್ 2013ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ಇದರಿಂದ ವಿಚಲಿತರಾದ ವೃತ್ತಿನಿರತ ಹ್ಯಾಕರ್‌ಗಳು, ಪ್ರತಿಭಟನೆಗಳ ಮೂಲ ಹೋರಾಟ ತೀವ್ರಗೊಳಿಸಿ ಮಾಹಿತಿ ಸ್ವಾತಂತ್ರ್ಯ ಎಲ್ಲರಿಗೂ ಇರಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಗೆ ಬಗ್ಗಿದ ಜಸ್ಟರ್ ಸಾರ್ವಜನಿಕ ಕ್ಷಮಾಪಣೆ ಕೇಳಿದ್ದಲ್ಲದೆ, ತನ್ನಲ್ಲಿರುವ ಬಹುತೇಕ ಮಾಹಿತಿಯನ್ನು ಯಾರು ಎಲ್ಲಿಂದ ಬೇಕಾದರೂ ಪಡೆಯಬಹುದು ಎಂದು ಮುಕ್ತ ಅವಕಾಶ ನೀಡಿದೆ.

ಜಗತ್ತಿನ ದತ್ತಾಂಶ ಸಂಸ್ಕರಣಾ ವ್ಯವಸ್ಥೆ ಹೆಚ್ಚು ಹೆಚ್ಚು ಮಾಹಿತಿ ಪಡೆದುಕೊಂಡು ಬಲವರ್ಧಿಸಿಕೊಳ್ಳುತ್ತ ಹೋದಂತೆ ಮನುಷ್ಯ ಬೃಹತ್ ದತ್ತಾಂಶದ ಹರಿವಿನ ಭಾಗವಾಗುತ್ತ ತನ್ನ ಇರುವಿಕೆಗೆ ಅರ್ಥ ಕಂಡುಕೊಳ್ಳುತ್ತಾನೆ. ಏಕೆಂದರೆ ಕಳೆದೊಂದು ಶತಮಾನದಿಂದ ಯಾವುದೇ ಹೊಸ ಮೌಲ್ಯವನ್ನು ನಿರೂಪಿಸದ ಮನುಷ್ಯ ಖಾಲಿಯಾಗಿ ಕೂತಿದ್ದಾನೆ. ತನಗೆ ಬೆಲೆ ತಂದುಕೊಳ್ಳಲು, ತನ್ನಲ್ಲಿರುವ ಮಾಹಿತಿಯನ್ನು ಇತರರಿಗೆ ಹಂಚಲೇಬೇಕು. ಮೊಬೈಲ್‌ನಲ್ಲಿ ಚಿತ್ರ ತೆಗೆದು ಬರೆದು, ಗೀಚಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ಇಡೀ ಜಗತ್ತಿಗೇ ಮಾಹಿತಿ ಹಂಚುತ್ತಿರುವ ಜನ ಯಾರ ನಿರ್ದೇಶನವೂ ಇಲ್ಲದೇ ಆ ಕೆಲಸ ಮಾಡುತ್ತಿದ್ದಾರೆ. ಇದನ್ನು ಮುಕ್ತವಾಗಿ ಸ್ವಾಗತಿಸಿರುವ ಡೇಟಾ ತಜ್ಞರು – ನೀವು ಅನುಭವಿಸಿದ್ದನ್ನು ದಾಖಲಿಸಿ, ಅಪ್‌ಲೋಡ್ ಮಾಡಿ, ಇಡೀ ಜಗತ್ತಿಗೆ ಹಂಚಿಕೊಂಡಾಗ ಮಾತ್ರ ಆ ಅನುಭವಕ್ಕೆ ಬೆಲೆ ಇರುತ್ತದೆ ಎನ್ನುತ್ತಾರೆ.

### ಅಪಾಯದ ಕರೆಗಂಟೆ

ಕೈಗಾರಿಕಾ ಕ್ರಾಂತಿಯ ಫಲವಾಗಿ ಕಾರುಗಳು ಚಲಾವಣೆಗೆ ಬಂದಾಗ, ಕುದುರೆ ಗಾಡಿಗಳಲ್ಲಿ ಓಡಾಡುತ್ತಿದ್ದ ನಾವೆಲ್ಲ ಕುದುರೆಗಳನ್ನು ಅಪ್‌ಗ್ರೇಡ್ ಮಾಡುವ ಬದಲಾಗಿ ಅವುಗಳ ಬಳಕೆಯನ್ನು ನಿಲ್ಲಿಸಿಯೇಬಿಟ್ಟೆವು. ಈಗ ಮನುಷ್ಯನ ಅಸ್ತಿತ್ವಕ್ಕೂ ಅಂಥದೊಂದು ಕುತ್ತು ಬಂದಿದೆಯೆ? ಹೌದೆನ್ನುತ್ತಾರೆ ಡೇಟಾ ತಜ್ಞರು. ಈಗ ಮನುಷ್ಯನಿಗೆ ಇನ್ನೊಂದು ಕೈಯೋ ಕಾಲನ್ನು ಬೆಳೆಸುವುದು ಸಾಧ್ಯವಿಲ್ಲ. ಅವನ ಅಪ್‌ಡೇಶನ್ ಏನಿದ್ದರೂ ಯಂತ್ರಗಳ ನೆರವಿನಿಂದಷ್ಟೇ ಆಗಬೇಕಿದೆ. ಮನುಷ್ಯನನ್ನು ಬದಲಾಯಿಸಲು ಸಮಯ ವ್ಯರ್ಥ ಮಾಡುವ ಬದಲು ಯಂತ್ರಗಳಿಗೇ ಸವಲತ್ತು ನೀಡಿದರೆ ಸಾಕಲ್ಲವೆ? ಎಂಬ ತರ್ಕ ಮೊದಲಾಗಿದೆ. ಹಾಗಾಗಿ ಮೆಶೀನ್ ಲರ್ನಿಂಗ್ ಪಾರಮ್ಯ ಗಳಿಸುತ್ತಿದೆ. ಇಂಟರ್ನೆಟ್, ಮೊಬೈಲ್‌ಗಳು ಇಂದು ಹೇಗೆ ನಮ್ಮನ್ನಾಳುತ್ತಿವೆಯೊ ಅಲ್ಗೊರಿದಂ ಕೂಡ ಕೃತಕ ಬುದ್ಧಿಮತ್ತೆಯ ಸಹಾಯದಿಂದ ಇಡೀ ಜಗತ್ತನ್ನೇ ತನ್ನ ಮುಷ್ಟಿಯಲ್ಲಿರಿಸಿಕೊಳ್ಳುವ ದಿನ ದೂರವಿಲ್ಲ. ಮನುಷ್ಯನ ನಿರ್ಧಾರಕ್ಕೆ ಅವಕಾಶ ನೀಡದ ಅಲ್ಗೊರಿದಂ ಅಪಾಯಕಾರಿಯಾಗುತ್ತದೆ. ನಾವೇ ರಚಿಸಿದ ಅಲ್ಗೊರಿದಂ ನಮ್ಮನ್ನೂ ಮೀರಿ ನಡೆದುಕೊಂಡರೆ ದೊಡ್ಡ ಅನಾಹುತವೇ ಸಂಭವಿಸುತ್ತದೆ.



ಬದುಕನ್ನು ಸುಲಭಗೊಳಿಸಿ, ಜಂಜಡ ನಿವಾರಿಸಿ ಜೀವ ರಕ್ಷಣೆಯ ಕೆಲಸ ಮಾಡುವ ಅಲ್ಗೊರಿದಂ ನಮ್ಮ ಅಂಕೆಯಲ್ಲಿದ್ದರೆ ಸರಿ. ಅದನ್ನು ಬಿಟ್ಟು ಯಾರೋ ಕೆಲವು ಶ್ರೀಮಂತರ, ಮಹತ್ವಾಕಾಂಕ್ಷಿಗಳ, ಸರ್ಕಾರ, ಕಾರ್ಪೊರೇಶನ್‌ಗಳ ಬೆರಳ ತುದಿಯಲ್ಲಿ ಕುಣಿಯುವಂತಾದರೆ ನಮ್ಮೆಲ್ಲರ ಕಥೆ ಮುಗಿದಂತೆಯೆ? ನಮಗಾಗಿಯೇ ಇರುವ ಅಲ್ಗೊರಿದಂ ಪ್ರತಿಯೊಬ್ಬರಿಗೂ ಸಂಬಂಧಿಸಿದ ದತ್ತಾಂಶ ಮಾಹಿತಿಯನ್ನು, ನಿರ್ಣಯಗಳನ್ನು ನಮಗೆ ನೀಡದೆ ಜಾಹೀರಾತುದಾರರಿಗೆ ಇಲ್ಲವೆ ಸರ್ಕಾರಗಳಿಗೆ ನೇರವಾಗಿ ಹಂಚಿಕೊಂಡರೆ? ಕೃತಕ ಬುದ್ಧಿಮತ್ತೆ ಮತ್ತು ಮಶೀನ್ ಲರ್ನಿಂಗ್‌ನ ಈ ದಿನಗಳಲ್ಲಿ ಪ್ರಾರಂಭದ ಕೆಲ ಹಂತಗಳವರೆಗೆ ನಮ್ಮನ್ನನುಸರಿಸುವ ಅಲ್ಗೊರಿದಂ ಮುಂದುವರೆದಂತೆಲ್ಲಾ ಸ್ವಯಂ ನಿರ್ಧಾರ ತೆಗೆದುಕೊಂಡು, ಸರ್ವಾಧಿಕಾರಿ ಧೋರಣೆ ಗಳಿಸಿಕೊಂಡರೆ ಹಿಟ್ಲರ್ ಮತ್ತು ಸ್ಟಾಲಿನ್‌ರನ್ನು ಮೀರಿಸುವ ಸರ್ವಾಧಿಕಾರಿ ಸರ್ಕಾರಗಳು ತಲೆ

## ಸರ್ವಂ ಮಾಹಿತಿಮಯಂ

ಇತ್ತೀಚಿನ ದಿನಗಳ ಅತಿ ದೊಡ್ಡ ಆಸ್ತಿ ಯಾವುದು? ಎಂದು ಯಾರನ್ನಾದರೂ ಕೇಳಿದರೆ ಒಬ್ಬಬ್ಬರು ಒಂದು ರೀತಿಯ ಉತ್ತರ ನೀಡುತ್ತಾರೆ. ಶತಮಾನದ ಚಿಂತಕರ ಪ್ರಕಾರ, ಅತ್ಯಂತ ದೊಡ್ಡ ಆಸ್ತಿ ಎಂದರೆ ಮಾಹಿತಿ ಮತ್ತು ಅದರಿಂದ ಹೆಕ್ಕಿ ತೆಗೆದ ದತ್ತಾಂಶ. ಇಂದಿನ ದಿನದಲ್ಲಿ ಮನುಷ್ಯನಿಗಿಂತ ಆತ ಸೃಜಿಸುವ ಮಾಹಿತಿಯೇ ಮುಖ್ಯವಾಗುತ್ತಿದೆ. ಅದನ್ನು ಕಾಪಾಡುವುದೇ ಹೊಸ ಕಾಲದ ಧರ್ಮವಾಗುತ್ತದೆ ಎಂಬುದು ತಜ್ಞರ ಅಂಬೋಣ. ಈ ಹೊಸ ಧರ್ಮದ ಪರಮೋಚ್ಚ ಮೌಲ್ಯ 'ಮಾಹಿತಿ ಸಂವಹನ'. ಮನುಷ್ಯನ ಜೊತೆಗೇ ಜೀವ ಸವೆಸುವ ನೂರಾರು ಪರಿಕರಗಳು ಪ್ರತೀ ಕ್ಷಣ ಮಾಹಿತಿ ಸಂಗ್ರಹಿಸಿಕೊಂಡು, ಸಂಸ್ಕರಿಸಿ, ಬೇಕಾದದ್ದು ಬೇಡವಾದದ್ದನ್ನು ಪ್ರತ್ಯೇಕಿಸುತ್ತಾ ಹೊಸ ಮಾಹಿತಿಯನ್ನು ಉತ್ಪಾದಿಸುತ್ತವೆ.

ಮಾಹಿತಿಯ ಪ್ರಸಾರ ಯಾವ ಕಾರಣಕ್ಕೂ ನಿಲ್ಲಬಾರದು ಮತ್ತು ಕೆಲವೇ ಕೆಲವು ವ್ಯವಸ್ಥೆ–ವ್ಯಕ್ತಿಗಳಲ್ಲಿ ಬಂಧಿಯಾಗಬಾರದು. ಎಲ್ಲದರ ಕುರಿತಾದ ಮಾಹಿತಿ ಎಲ್ಲರಿಗೂ ಸಿಗುವಂತಿರಬೇಕು. ಅದರ ನಿರೂಪಕಿಯೊ ಎಂಬಂತೆ ಹಾಲಿವುಡ್ ನಟಿ ಏಂಜಲಿನ ಜೋಲಿ, ತನಗೆ ಸ್ತನದ ಕ್ಯಾನ್ಸರ್ ಇದ್ದುದರಿಂದ ಎರಡೂ ಸ್ತನಗಳನ್ನು ತೆಗೆಸಿಕೊಂಡಿದ್ದರ ಬಗ್ಗೆ ಮುಕ್ತವಾಗಿ ಇಡೀ ಜಗತ್ತಿಗೇ ಹೇಳಿದ್ದಳು. ಅಜ್ಜಿ ಮತ್ತು ಅಮ್ಮ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದರು.

ತನಗೂ ಸಹ ಕ್ಯಾನ್ಸರ್ ತಗುಲುವ ಶೇ. 87ರಷ್ಟು ಸಾಧ್ಯತೆ ಇದ್ದುದು ಮಾಡಿಸಿಕೊಂಡ ವೈದ್ಯಕೀಯ ಪರೀಕ್ಷೆಯಿಂದ ತಿಳಿದು ಬಂದದ್ದರಿಂದ ಸೂಕ್ತ ಸಮಯದಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಲು ಸಾಧ್ಯವಾಯಿತು, ಇತರರೂ ತನ್ನಂತೆ ಜಾಗ್ರತೆ ವಹಿಸಲಿ ಎಂದಿದ್ದಳು.